# ದೃಕ್‌ಸಾಕ್ಷ್ಯ

ಅಲ್ಲಾಹನನ್ನು ಸಹಾಯಕ್ಕೆ ಕೂಗಿ ಕರೆಯುವವರಿಗೆ ಅಲ್ಲಾಹ್ ಸಹಾಯ ಮಾಡುವುದನ್ನು ಮತ್ತು ಆ ಮೂಲಕ ಸಂಕಷ್ಟ ಪೀಡಿತರಿಗೆ ನೆರವಾಗುವುದನ್ನು ನಾವು ಪ್ರತಿನಿತ್ಯವೂ ನೋಡುತ್ತಿರುತ್ತೇವೆ. ಎಂತಹ ಸಂಕಷ್ಟದಲ್ಲೂ ಅಲ್ಲಾಹನೇ ಸಹಾಯ ಮಾಡುವವನು ಎಂಬುದು ಓರ್ವ ಮುಸ್ಲಿಮನ ವಿಶ್ವಾಸವಾಗಿರುತ್ತದೆ. ಬದ್ರ್ ಯುದ್ಧದ ವೇಳೆ ಮುಸ್ಲಿಮರು ಅಲ್ಲಾಹನಲ್ಲಿ ಸಹಾಯಕ್ಕೆ ಮೊರೆಯಿಟ್ಟಾಗ, ಅಲ್ಲಾಹನು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದ್ದನು ಮತ್ತು ತನ್ನ ವಿಶೇಷ ಸೇನೆಯ ಮೂಲಕ ಅವರಿಗೆ ಸಹಾಯ ಮಾಡಿದ್ದನು ಎಂಬುದು ಐತಿಹಾಸಿಕ ಸತ್ಯವಾಗಿದೆ. ಆ ಘಟನೆಯು ಈ ರೀತಿ ದಾಖಲೆಗೊಂಡಿದೆ,

﴿إِذْ تَسْتَغِيثُونَ رَبَّكُمْ فَاسْتَجَابَ لَكُمْ أَنِّي مُمِدُّكُم بِأَلْفٍ مِّنَ الْمَلَائِكَةِ مُرْدِفِينَ ﴿٩﴾﴾ الأنفال: ٩

"ನೀವು ನಿಮ್ಮ ಪ್ರಭುವಿನೊಡನೆ ಮೊರೆಯಿಡುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ನಾನು ನಿಮ್ಮ ಸಹಾಯಕ್ಕಾಗಿ ಸರದಿಯಂತೆ ಒಂದು ಸಾವಿರ ದೇವಚರರನ್ನು ಕಳುಹಿಸುತ್ತಲಿದ್ದೇನೆಂದು ಅವನು ಉತ್ತರಿಸಿದನು." (ಪವಿತ್ರ ಕುರ್‌ಆನ್, ಅಲ್ ಅನ್ ಫಾಲ್: 9)

ಇನ್ನೊಂದು ದೃಶ್ಯ ಪ್ರವಾದಿ ಝಕರಿಯ್ಯ(ಅ) ಪ್ರಾರ್ಥನೆಯಾಗಿದೆ. ಅವರು ಅಲ್ಲಾಹನಲ್ಲಿ ಉತ್ತಮ ಸಂತಾನವನ್ನು ಬೇಡಿದರು. ಅಲ್ಲಾಹನು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಪ್ರವಾದಿ ಯಹ್ಯಾರ(ಅ) ಜನನದ ಕುರಿತು ಸುವಾರ್ತೆ ನೀಡಿದನು. ವಸ್ತುತಃ ಅವರ ಪತ್ನಿ ವಯೋವೃದ್ಧೆಯಾಗಿದ್ದರು. ಅಲ್ಲಾಹ್ ಹೇಳುತ್ತಾನೆ,

﴿وَزَكَرِيَّا إِذْ نَادَىٰ رَبَّهُ رَبِّ لَا تَذَرْنِي فَرْدًا وَأَنتَ خَيْرُ الْوَارِثِينَ ﴿٨٩﴾ فَاسْتَجَبْنَا لَهُ وَوَهَبْنَا لَهُ يَحْيَىٰ وَأَصْلَحْنَا لَهُ زَوْجَهُ ۚ إِنَّهُمْ كَانُوا يُسَارِعُونَ فِي الْخَيْرَاتِ وَيَدْعُونَنَا رَغَبًا وَرَهَبًا ۖ وَكَانُوا لَنَا خَاشِعِينَ ﴿٩٠﴾﴾ الأنبياء: ٨٩ - ٩٠

"ಝಕರಿಯ್ಯಾ(ರಿಗೂ ನಾವು ಅನುಗ್ರಹ ನೀಡಿದೆವು) ಅವರು, 'ನನ್ನ ಪ್ರಭೂ ನನ್ನನ್ನು ಏಕಾಂಗಿಯಾಗಿ ಬಿಟ್ಟು ಬಿಡಬೇಡ. ಅತ್ಯುತ್ತಮ ವಾರೀಸುದಾರ ನೀನೇ ಆಗಿರುತ್ತೀ' ಎಂದು ತನ್ನ ಪ್ರಭುವನ್ನು ಕೂಗಿ ಕರೆದ ಸಂದರ್ಭವನ್ನು ಸ್ಮರಿಸಿರಿ. ಆ ಪ್ರಕಾರ ನಾವು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದೆವು ಮತ್ತು ಅವರಿಗೆ ಯಹ್ಯಾರನ್ನು ನೀಡಿದೆವು. ಅವರ ಪತ್ನಿಯನ್ನು ಅವರಿಗಾಗಿ ಸರಿಪಡಿಸಿದೆವು. ಅವರೆಲ್ಲರೂ ಪುಣ್ಯ ಕಾರ್ಯಗಳಲ್ಲಿ ಉತ್ಸುಕರಾಗಿದ್ದರು. ನಮ್ಮನ್ನು ಒಲವು ಹಾಗೂ ಭಯದೊಂದಿಗೆ ಪ್ರಾರ್ಥಿಸುತ್ತಿದ್ದರು ಮತ್ತು ನಮ್ಮ ಮುಂದೆ ಬಾಗಿಕೊಂಡಿದ್ದರು." (ಪವಿತ್ರ ಕುರ್‌ಆನ್, ಅಲ್ ಅಂಬಿಯಾ: 89–90)



www.uzairfalahi.com

**ಅಂತಹುದೇ** ಒಂದು ಘಟನೆಯು ಪ್ರವಾದಿವರ್ಯರ(ಸ) ಕಾಲದಲ್ಲಿಯೂ ಸಂಭವಿಸಿತ್ತು. ಮದೀನದಲ್ಲಿ ತೀವ್ರ ಬರಗಾಲ ಬಾಧಿಸಿದ್ದ ಸಂದರ್ಭವಾಗಿತ್ತು ಅದು. ಪ್ರವಾದಿವರ್ಯರು(ಸ) ಮಿಂಬರ್ ಪ್ರವಚನ ನೀಡುತ್ತಿದ್ದರು. ಅಷ್ಟರಲ್ಲಿ ಓರ್ವ ಗ್ರಾಮೀಣನು ಎದ್ದು ಹೇಳಿದ, "ಅಲ್ಲಾಹನ ಸಂದೇಶವಾಹಕರೇ(ಸ) ಸಂಪತ್ತೆಲ್ಲ ನಾಶವಾಯಿತು. ಮಕ್ಕಳು ಹಸಿವಿನಿಂದ ಚಡಪಡಿಸುತ್ತಿದ್ದಾರೆ. ಈ ಸಂಕಷ್ಟ ದೂರವಾಗಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿರಿ." ಪ್ರವಾದಿವರ್ಯರು(ಸ) ಕೈಯೆತ್ತಿ ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಅವರ ಪ್ರಾರ್ಥನೆಯು ಸ್ವೀಕಾರಗೊಂಡಿತು. ನೋಡನೋಡುತ್ತಿದ್ದಂತೆಯೇ ಮೋಡಗಳು ಆವರಿಸಿದುವು. ಪ್ರವಾದಿವರ್ಯರು(ಸ) ಪ್ರಾರ್ಥನೆಯನ್ನು ಮುಗಿಸುವುದಕ್ಕೆ ಮುನ್ನವೇ ಮಳೆ ಸುರಿಯತೊಡಗಿತು. ಪ್ರವಾದಿವರ್ಯರ(ಸ) ಮೇಲೆ ಮಳೆ ನೀರು ಸುರಿಯುತ್ತಿರುವುದನ್ನು ಮತ್ತು ಅವರ ಹಸ್ತಗಳಿಂದ ನೀರು ತೊಟ್ಟಿಕ್ಕುತ್ತಿರುವುದನ್ನು ಜನರು ಕಂಡರು. ಈ ಮಳೆಯು ನಿರಂತರ ಒಂದು ವಾರದ ವರೆಗೆ ಸುರಿಯಿತು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಕಂಡು ಓರ್ವ ವ್ಯಕ್ತಿಯು ಪ್ರವಾದಿವರ್ಯರಲ್ಲಿ(ಸ) ಹೀಗೆ ಅರಿಕೆ ಮಾಡಿಕೊಂಡರು, "ಯಾ ರಸೂಲಲ್ಲಾಹ್(ಸ)! ಮನೆಗಳು ಬೀಳುತ್ತಿವೆ, ಸಂಪತ್ತುಗಳೆಲ್ಲವೂ ಮುಳುಗುತ್ತಿವೆ. ಅಲ್ಲಾಹನಲ್ಲಿ ಮಳೆ ನಿಲ್ಲಿಸಲು ಪ್ರಾರ್ಥಿಸಿರಿ." ಪ್ರವಾದಿವರ್ಯರು(ಸ) ಹಾಗೆಯೇ ಪ್ರಾರ್ಥಿಸಿದರು ಮತ್ತು ಮಳೆ ನಿಂತಿತು. (ಮುತ್ತಫಕ್ ಅಲೈಹಿ)

كانَ رَسُولُ اللَّهِ صَلَّى اللهُ عَلَيْهِ وَسَلَّمَ يَخْطُبُ عَلَى المِنْبَرِ يَوْمَ الجُمُعَةِ قَامَ أَعْرَابِيٌّ، فَقَالَ: يَا رَسُولَ اللَّهِ، هَلَكَ المَالُ، وَجَاعَ العِيَالُ، فَادْعُ اللَّهَ لَنَا أَنْ يَسْقِيَنَا، قَالَ: فَرَفَعَ رَسُولُ اللَّهِ صَلَّى اللهُ عَلَيْهِ وَسَلَّمَ يَدَيْهِ وَمَا فِي السَّمَاءِ قَزَعَةٌ، قَالَ: فَثَارَ سَحَابٌ أَمْثَالُ الجِبَالِ، ثُمَّ لَمْ يَنْزِلْ عَنْ مِنْبَرِهِ حَتَّى رَأَيْتُ المَطَرَ يَتَحَادَرُ عَلَى لِحْيَتِهِ، قَالَ: فَمُطِرْنَا يَوْمَنَا ذَلِكَ، وَفِي الغَدِ، وَمِنْ بَعْدِ الغَدِ، وَالَّذِي يَلِيهِ إِلَى الجُمُعَةِ الأُخْرَى، فَقَامَ ذَلِكَ الأَعْرَابِيُّ - أَوْ رَجُلٌ غَيْرُهُ - فَقَالَ: يَا رَسُولَ اللَّهِ، تَهَدَّمَ البِنَاءُ وَغَرِقَ المَالُ، فَادْعُ اللَّهَ لَنَا، فَرَفَعَ رَسُولُ اللَّهِ صَلَّى اللهُ عَلَيْهِ وَسَلَّمَ يَدَيْهِ، وَقَالَ: «اللَّهُمَّ حَوَالَيْنَا، وَلاَ عَلَيْنَا» فتوقف المطَرَ (متفق عليه)

* * * * *

www.uzarfahi.com